# ಸ್ಪಂದನಾ ಯಾನ ನವನವೀನ

‘ದಿಲ್‌ಖುಷ್’ ಸಿನಿಮಾ ಮೂಲಕ ಟೀವಿಯಿಂದ ಚಂದನವನಕ್ಕೆ ಹೊರಳಿರುವ ನಟಿ ಸ್ಪಂದನಾ ಸೋಮಣ್ಣ, ತಮ್ಮನ್ನು ಗುರುತಿಸುವಂಥ ಪಾತ್ರಗಳನ್ನು ಎದುರು ನೋಡುತ್ತಿದ್ದಾರೆ.

■ ಸುಮಲತಾ ಎನ್‌.



‘ನಾನು ನನ್ನ ಕನಸು’ ಧಾರಾವಾಹಿಯಲ್ಲಿ ಅಭಿನಯಿಸಿದ್ದ ಸ್ಪಂದನಾ ಸೋಮಣ್ಣ, ಇದೀಗ ಸ್ಯಾಂಡಲ್‌ವುಡ್‌ನಲ್ಲಿ ಸಾಮರ್ಥ್ಯ ಪರೀಕ್ಷೆಗೆ ಸಜ್ಜಾಗಿದ್ದಾರೆ. ಕಿರುತೆರೆಯ ಅನುಭವದ ಜೊತೆಗೆ ಬಣ್ಣದ ಲೋಕದೆಡೆಗೆ ಬೆರಗು ತುಂಬಿಕೊಂಡು ಸಿನಿಮಾ ರಂಗದಲ್ಲಿ ಗುರುತಿಸಿಕೊಳ್ಳುವ ಹುಮ್ಮಸ್ಸಿನಲ್ಲಿದ್ದಾರೆ.

ಸ್ಪಂದನಾ, ಮೈಸೂರಿನ ಹುಡುಗಿ. ಎಂಜಿನಿಯರಿಂಗ್ ಓದಿರುವ ಅವರಲ್ಲಿ, ಕಾಲೇಜಿನಲ್ಲಿ ನಡೆಯುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳು, ಮೈಸೂರಿನ ವಿಶೇಷ ದಸರಾ ಕಾರ್ಯಕ್ರಮಗಳು ಬಣ್ಣದ ಕನಸುಗಳನ್ನು ತುಂಬಿದ್ದವು. ಫ್ಯಾಷನ್ ಶೋಗಳಲ್ಲಿ ರೂಪದರ್ಶಿಯಾಗಿ ಮಿಂಚಿದ್ದು ಅವರ ಕನಸುಗಳಿಗೆ ರೆಕ್ಕೆ ಕಟ್ಟಿತ್ತು. ಸಾಮಾಜಿಕ ಜಾಗೃತಿ ಮೂಡಿಸುವ ಸಣ್ಣಪುಟ್ಟ ನಾಟಕಗಳನ್ನೂ ಮಾಡಿದ್ದ ಅವರಲ್ಲಿ ನಟನೆಯೆಡೆಗೆ ಪುಟ್ಟದೊಂದು ಆಸಕ್ತಿಯೂ ಚಿಗುರಿತ್ತು.

‘ಪುಟ್ಟ ಹುಡುಗಿಯಿದ್ದಾಗಿಂದಲೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮುಂದಿದ್ದೆ. ಅಮ್ಮನಿಗೂ ನನ್ನನ್ನು ಕಲಾವಿದೆಯಾಗಿ ನೋಡಲು ಇಷ್ಟ ಇತ್ತು. ಆದರೆ ಸಿನಿಮಾ ನಟಿಯಾಗಬೇಕು ಎನ್ನುವ ಯಾವುದೇ ಯೋಚನೆ ನನಗಾಗಲೀ ಮನೆಯವರಿಗಾಗಲೀ ಇರಲಿಲ್ಲ. ಅಕಸ್ಮಾತ್ ಎಂಬಂತೆ ಧಾರಾವಾಹಿಯಲ್ಲಿ ನಟಿಸುವ ಅವಕಾಶ ಬಂದಿತು. ಇದೀಗ ಸಿನಿಮಾದಲ್ಲಿ ನಟಿಸುತ್ತಿದ್ದೇನೆ’ ಎಂದು ಖುಷಿಯಿಂದ ಹೇಳಿಕೊಳ್ಳುತ್ತಾರೆ ಸ್ಪಂದನಾ.

ಎಂಜಿನಿಯರಿಂಗ್ ಮುಗಿಸಿದ್ದ ಸ್ಪಂದನಾಗೆ ಪುಣೆಯಲ್ಲಿ ಕೆಲಸ ದೊರೆತು, ಅಲ್ಲಿಗೆ ಸೇರಲು ಮೂರು ತಿಂಗಳ ಕಾಲಾವಕಾಶ ಇತ್ತು. ಅದೇ ಅವಧಿಯಲ್ಲಿ ಕನ್ನಡದ ‘ನಾನು ನನ್ನ ಕನಸು’ ಧಾರಾವಾಹಿಯಲ್ಲಿ ನಟಿಸುವ ಅವಕಾಶ ಅಚಾನಕ್ಕಾಗಿ ಒದಗಿಬಂತು. ಇಷ್ಟು ವರ್ಷ ಓದಿ ಕೆಲಸಕ್ಕೆ ಸೇರದಿದ್ದರೆ ಹೇಗೆಂಬುದು ಒಂದೆಡೆಯಾದರೆ, ಸಿಕ್ಕಿರುವ ಅವಕಾಶವನ್ನು ಉಪಯೋಗಪಡಿಸಿಕೊಳ್ಳಬೇಕು ಎಂಬ ಆಲೋಚನೆ ಮತ್ತೊಂದೆಡೆ. ಸ್ಪಂದನಾ ಆರಿಸಿಕೊಂಡಿದ್ದು ನಟನೆಯನ್ನು. ಅವರ ಆಸಕ್ತಿಗೆ ಮನೆಯವರ ಸಾಥ್ ಕೂಡ ಸಿಕ್ಕಿತು.

ಕನ್ನಡ ಹಾಗೂ ತೆಲುಗು ಧಾರಾವಾಹಿಯಲ್ಲಿ ಅವಕಾಶ ಸಿಕ್ಕಿತು. ‘ನಾನು ನನ್ನ ಕನಸು’ ಧಾರಾವಾಹಿ ನಟನೆಯೆಡೆಗೆ ನನ್ನಲ್ಲಿ ಕನಸು ಹುಟ್ಟುಹಾಕಲು ಕಾರಣವಾಯಿತು ಎಂದು ನಗುತ್ತಾರೆ.

ಕೊರೊನಾ ಕಾರಣವಾಗಿ ಎರಡು ಧಾರಾವಾಹಿಗಳೂ ನಿಂತುಹೋದವು. ಸ್ವಲ್ಪ ದಿನಗಳಲ್ಲೇ ಸಿನಿಮಾ ಕುರಿತ ಮಾತುಕತೆ ನಡೆದವು. ಆದರೆ ಸಿನಿಮಾ ರಂಗಕ್ಕೆ ಬರಬೇಕೋ ಬೇಡವೋ ಎಂಬ ದ್ವಂದ್ವದಲ್ಲಿದ್ದ ಸ್ಪಂದನಾ ಅವರ ಬಳಿ ‘ದಿಲ್ ಖುಷ್’ ಅವಕಾಶ ಒದಗಿಬಂದಿತ್ತು. ಕಥೆ ಕೇಳಿದ ಅವರಲ್ಲಿ ಈ ಸಿನಿಮಾ ಭಾಗವಾಗುವ ಮನಸ್ಸಾಯಿತು.

‘ದಿಲ್ ಖುಷ್’ ಆಸಕ್ತಿಕರ ತಂಡ. ನಿರ್ದೇಶಕ ಪ್ರಮೋದ್ ಜಯ ಅವರಿಗೆ ಸಿಂಪಲ್ ಸುನಿ ಅವರೊಂದಿಗೆ ಕೆಲಸ ಮಾಡಿದ ಅನುಭವವಿದೆ. ನಾಯಕ ರಂಜಿತ್ ಅವರು ಕೂಡ ಸಿನಿಮಾಗೆ ಹೊಸಬರು. ರಂಗಾಯಣ ರಘು, ಅರುಣಾ ಬಾಲರಾಜ್ ಅವರಂಥ ನುರಿತ ನಟರು ಸಿನಿಮಾದಲ್ಲಿದ್ದಾರೆ. ಸಿನಿಮಾದಲ್ಲಿ ನನ್ನದು ಇಂಡಿಪೆಂಡೆಂಟ್ ಹುಡುಗಿಯ ಪಾತ್ರ. ಅಪ್ಪ ಎಂದರೆ ಅಗಾಧ ಪ್ರೀತಿ ಇಟ್ಟುಕೊಂಡಿರುವ ಅವಳ ಜೀವನ, ಅವಳ ಪ್ರೇಮ ನಿರೂಪಣಾ ಬಗೆಯನ್ನು ಕಥೆ ತೆರೆದಿಡುತ್ತದೆ. ಸಿನಿಮಾದಲ್ಲಿ ಎಲ್ಲಾ ಪಾತ್ರಗಳಿಗೂ ಅರ್ಥವಿದೆ. ಇದೇ ಕಾರಣಕ್ಕೆ ಕಥೆ ಇಷ್ಟವಾಯಿತು’ ಎಂದು ವಿವರಿಸುತ್ತಾರೆ.

ತೆಲುಗು ಭಾಷೆಯ ವೆಬ್ ಸಿರೀಸ್ ಒಂದರಲ್ಲೂ ನಟಿಸಿರುವ ಸ್ಪಂದನಾಗೆ,